# ಬೆಳಕಿನ ನೆರಳು

## ಮಹಾತ್ಮ ಮತ್ತು ಹರಿಲಾಲ್


■ ಮೂಲ: **ದಿನಕರ್ ಜೋಶಿ**

■ ಕನ್ನಡಕ್ಕೆ: **ಡಿ.ಎನ್. ಶ್ರೀನಾಥ್**

ಕಲೆ: ಮನೋಹರ ಆಚಾರ್ಯ




## ಹರಿಲಾಲ ಅಸ್ತಂಗತ

'ಸರೂ! ಇಲ್ಲಿ ಬಾ ಮಗಳೇ. ನೀನು ನನ್ನ ಮನುವಿನಂತೆ. ಹೀಗೆಂದು ಹರಿಲಾಲ ಒಂದು ಪ್ಯಾಕೇಟನ್ನು ಚಾಚಿದ, 'ತಗೋ, ಇದರಲ್ಲಿ ಹಣವಿದೆ, ತಗೋ ತಗೋ...ಖರ್ಚಿಗೆ ಬರುತ್ತದೆ. ಕಾಂತಿಗೆ ಇಷ್ಟವಾದ ಹಣ್ಣುತರಕಾರಿಗಳನ್ನು ತಂದಿದ್ದೇನೆ...ಈ ಹಣದಿಂದ ನಿನಗೆ ಪೌಡರ್, ಕ್ರೀಮ್‌ಗಳನ್ನು ತಗೋ...'

ಸರಸ್ವತಿ ಕಂಪಿಸಿದಳು. ಸಾರಾಯಿ ಕುಡಿದ ಮಾವನ ಸಮೀಪಕ್ಕೆ ಹೋಗಲು ಅವಳಿಗೆ ಭಯವಾಯಿತು. ಅಮಲಿಗೊಳಗಾದ ವ್ಯಕ್ತಿಯೊಬ್ಬನನ್ನು ಅವಳು ಇಷ್ಟು ಸಮೀಪದಿಂದ ಮಾತನಾಡಿದ್ದನ್ನು ಎಂದೂ ನೋಡಿರಲಿಲ್ಲ. ನೋಟುಗಳಿಂದ ತುಂಬಿದ್ದ ಆ ಪ್ಯಾಕೇಟನ್ನು ತೆಗೆದುಕೊಳ್ಳಲು ತನ್ನ ಕೈಯನ್ನು ಮುಂದಕ್ಕೆ ಚಾಚದಾದಳು.

'ತಗೋ ಸರು...' ಹರಿಲಾಲ ಹಣದ ಪ್ಯಾಕೇಟನ್ನು ತೆಗೆದುಕೊಳ್ಳುವಂತೆ ಒತ್ತಾಯಿಸಿದ.

'ಅಪ್ಪಾ...ಅಪ್ಪಾ....ನನಗೆ ಹೆದರಿಕೆಯಾಗುತ್ತಿದೆ. ಈ ಹಣ ನಮ್ಮದಲ್ಲ. ನೀವು ಸಾರಾಯಿಯನ್ನು ಕುಡಿದಿದ್ದೀರ...ಈಗ ನಿಮ್ಮ ಮಗ ಬಂದರೆ ಅವರಿಗೆಷ್ಟು ದುಃಖವಾಗುವುದು.' ಸರಸ್ವತಿ ರೋದಿಸಿದಳು.

'ಸರೂ...' ಹರಿಲಾಲನ ಕಣ್ಣುಗಳಿಂದ ಅಕಸ್ಮಾತ್ ಕಣ್ಣೀರು ಹರಿಯಿತು. ಹಣ್ಣುಗಳ ಬುಟ್ಟಿ ಮತ್ತು ಹಣದ ಪ್ಯಾಕೇಟನ್ನು ಕೆಳಗಿಟ್ಟು ಹರಿಲಾಲ ಕೈಮುಗಿದ, 'ನನಗೆ ಗೊತ್ತಿದೆ ಮಗಳೇ. ನನ್ನ ಈ ವರ್ತನೆಯಿಂದ ನಿನಗೆ ನೋವನ್ನುಂಟು ಮಾಡಿದ್ದೇನೆ...ಆದರೆ...ನಾನೇನು ಮಾಡಲಿ? ನಾನು ತುಂಬಾ ಕೆಟ್ಟ ಮನುಷ್ಯ. ನಿನ್ನ ನಿಸ್ವಾರ್ಥ ಸೇವೆಗೆ ನಾನು ಯೋಗ್ಯನಲ್ಲ...ನನಗೆ ಸಾರಾಯಿಯ ಚಟವಿದೆ. ನಾನು ಅಸಹಾಯಕ...ಇನ್ನು ನನ್ನ ಸುಧಾರಣೆ ಸಾಧ್ಯವಿಲ್ಲ...ಅಳಬೇಡ. ಈ ಮುದುಕನನ್ನು ಕ್ಷಮಿಸಿಬಿಡು, ಮಗಳೇ...ಕಾಂತಿಗೂ, ನನ್ನನ್ನು ಕ್ಷಮಿಸುವಂತೆ ಹೇಳು...'

ಸರಸ್ವತಿ ಬಿಕ್ಕಳಿಸುತ್ತಾ ರೋದಿಸುತ್ತಿದ್ದಳು. ಹರಿಲಾಲ ಮುಂದಕ್ಕೆ ಬಂದು ಅವಳ ತಲೆಯನ್ನು ನೇವರಿಸಿದ, ತನ್ನ ಬನಿಯನ್ ಒಳಗಿನಿಂದ ಭಾವಚಿತ್ರವೊಂದನ್ನು ಹೊರ ತೆಗೆದ. ಅದನ್ನು ಸರಸ್ವತಿಯ ಎದುರಿಗೆ ಹಿಡಿದು ಎವೆಯಿಕ್ಕದೆ ಅವಳನ್ನೇ ನೋಡಿದ.

'ನೋಡು ಮಗಳೇ, ಇವಳು ನಿನ್ನ ಅತ್ತೆ. ಎಷ್ಟು ಚೆಂದ ಕಾಣಿಸುತ್ತಿದ್ದಾಳಲ್ಲ?' ಈಗ ಹರಿಲಾಲ ತನ್ನೊಂದಿಗೇ ಮಾತನಾಡಿಕೊಳ್ಳುವಂತೆ ಹೇಳಿದ, 'ಇವಳ ಕಣ್ಣುಗಳು ಎಷ್ಟು ಸುಂದರವಾಗಿವೆ...ಅವಳಲ್ಲಿ ತುಂಬಾ ಮಮತೆಯಿತ್ತು... ಅವಳು ಬದುಕಿದ್ದರೆ...' ಹರಿಲಾಲ ಕಣ್ಣೀರನ್ನು ಒರೆಸಿಕೊಂಡು ಮೆಲ್ಲನೆ